# ಮಾತೆ ಮೇರಿ ಸೇನೆ




## ಪ್ರಾರಂಭ ಪ್ರಾರ್ಥನೆ

ಪಿತನ ಮತ್ತು ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ, ಆಮೆನ್.

ಗು: ಪವಿತ್ರಾತ್ಮರೇ ಬನ್ನಿ; ನಿಮ್ಮ ಭಕ್ತರ ಹೃದಯಗಳನ್ನು ತುಂಬಿರಿ; ನಿಮ್ಮ ಪ್ರೇಮಾಗ್ನಿಯನ್ನು ಅವರಲ್ಲಿ ಪ್ರಜ್ವಲಗೊಳಿಸಿರಿ. ನಿಮ್ಮ ಶ್ವಾಸವನ್ನು ಊದಿರಿ; ನವ ಜೀವನವು ಉತ್ಪನ್ನವಾಗುವುದು.

ಸ: ಭೂಮಿಯು ಹೊಸದಾಗುವುದು.ಪ್ರಾರ್ಥಿಸೋಣ

ದೇವರೇ, ನಮ್ಮ ತಂದೆಯೇ, ಈ ವಿಶ್ವದ ಮೇಲೆ / ನಿಮ್ಮ ಪವಿತ್ರಾತ್ಮರ ವರಗಳನ್ನು ಸುರಿಸಿರಿ. ನಿಮ್ಮ ಧರ್ಮಸಭೆಯಲ್ಲಿ, ಶುಭಸಂದೇಶವನ್ನು ಬೋಧಿಸ ಪ್ರಾರಂಭಿಸಲು / ಪವಿತ್ರಾತ್ಮರನ್ನು ಕಳುಹಿಸಿದಿರಿ; ಈಗಲೂ ಸಹ / ಅದೇ ಆತ್ಮರ ವರವನ್ನು ಮುಂದುವರೆಸುತ್ತಾ, ಶುಭಸಂದೇಶದ ಕಾರ್ಯವು / ಈ ವಿಶ್ವದಲ್ಲಿ ಕಾರ್ಯಗತವಾಗಲು, ಎಲ್ಲಾ ನಂಬಿಕಸ್ತ ವಿಶ್ವಾಸಿಗಳ / ಹೃದಯದ ಮೂಲಕ ಮುನ್ನಡೆಯುವಂತೆ, ನಮ್ಮ ಕರ್ತ ಯೇಸುಕ್ರಿಸ್ತರ ಮುಖಾಂತರ ಕರುಣಿಸಿರಿ, ಆಮೆನ್.

ಗು : ಕರ್ತರೇ, ನೀವು ನನ್ನ ತುಟಿಗಳನ್ನು ತೆರೆಯುವಿರಿ.

ಸ : ನನ್ನ ನಾಲಿಗೆಯು ನಿಮ್ಮನ್ನು ಹೊಗಳುವುದು.

ಗು : ಓ ದೇವರೇ, ನನಗೆ ಸಹಾಯ ಮಾಡ ಕರುಣಿಸಿರಿ.

ಸ : ಓ ಕರ್ತರೇ, ನನಗೆ ನೆರವಾಗಲು ಶೀಘ್ರ ಬನ್ನಿ.

ಗು : ಪಿತನಿಗೂ ಸುತನಿಗೂ ಪವಿತ್ರಾತ್ಮನಿಗೂ ಮಹಿಮೆ ಆಗಲಿ

ಸ : ಆದಿಯಲ್ಲಿ ಇದ್ದ ಹಾಗೆ ಈಗಲೂ ಯಾವಾಗಲೂ ಯುಗಯುಗಾಂತರಕ್ಕೂ, ಆಮೆನ್.

(ಅನಂತರ ಜಪಸರವನ್ನು ಹೇಳಿ ನಮೋ ರಾಣಿಯೇ ಎಂಬ ಪ್ರಾರ್ಥನೆಯನ್ನು ಹೇಳತಕ್ಕದ್ದು.)

# ಜಪಮಾಲೆಯ ರಹಸ್ಯಗಳು

## ಅ. ಸಂತೋಷದ ರಹಸ್ಯಗಳು

( ಸೋಮವಾರ ಮತ್ತು ಶನಿವಾರ)

೧. ಗಾಬ್ರಿಯೇಲ್ ದೂತನು ಸಂತ ಮರಿಯಮ್ಮನವರಿಗೆ ಮಂಗಳ ವಾರ್ತೆಯನ್ನು ಹೇಳಿದರು.

೨. ದೇವ ಮಾತೆಯು ಸಂತ ಎಲಿಸಬೇತಮ್ಮನನ್ನು ಸಂಧಿಸಿದರು.

೩. ಯೇಸು ದನದ ಕೊಟ್ಟಿಗೆಯಲ್ಲಿ ಜನಿಸಿದರು.

೪. ಮರಿಯಮ್ಮನವರು ಯೇಸು ಬಾಲರನ್ನು ದೇವಾಲಯದಲ್ಲಿ ಕಾಣಿಕೆಯಾಗಿ ಒಪ್ಪಿಸಿದರು.

೫. ಮೂರು ದಿವಸ ಕಾಣದೆ ಹೋದ ಯೇಸು ಬಾಲರು ದೇವಾಲಯದಲ್ಲಿ ಮಾತಾಪಿತೃಗಳಿಗೆ ಸಿಕ್ಕಿದರು.

## ಆ. ದುಃಖದ ರಹಸ್ಯಗಳು

(ಮಂಗಳವಾರ ಮತ್ತು ಶುಕ್ರುವಾರ )

೧. ಯೇಸು ಜೆತ್ಸೆಮನಿ ತೋಪಿನಲ್ಲಿ ರಕ್ತದ ಬೆವರನ್ನು ಸುರಿಸಿದರು.

೨. ಯೇಸುವನ್ನು ಕಲ್ಲಿನ ಕಂಭಕ್ಕೆ ಕಟ್ಟಿ, ಚಾಟಿಗಳಿಂದ ಹೊಡೆದರು.

೩. ಯೇಸುವಿನ ಶಿರಸ್ಸಿಗೆ ಮುಳ್ಳಿನ ಕಿರೀಟವನ್ನು ತೊಡಿಸಿದರು.

೪. ಯೇಸು ಶಿಲುಬೆಯನ್ನು ಎತ್ತಿಕೊಂಡು ಕಪಾಲ ಬೆಟ್ಟವನ್ನು ಹತ್ತಿದರು.

೫. ಶಿಲುಬೆಯಲ್ಲಿ ಮೃತರಾದ ಯೇಸುವನ್ನು ಸಮಾಧಿಯಲ್ಲಿ ಇರಿಸಿದರು.

## ೩. ಜ್ಯೋತಿ ರಹಸ್ಯಗಳು

(ಗುರುವಾರ)

೧. ಜೋರ್ದಾನ್ ನದಿಯಲ್ಲಿ ಯೇಸುಕ್ರಿಸ್ತರ ದೀಕ್ಷಾಸ್ನಾನ
೨. ಕಾನಾ ಊರಿನ ವಿವಾಹದಲ್ಲಿ ಯೇಸುಕ್ರಿಸ್ತರ ಸ್ವ–ಪರಿಚಯ.
೩. ಹೃದಯ ಪರಿವರ್ತನೆಯ ಮೂಲಕ ದೈವರಾಜ್ಯದ ಬಗ್ಗೆ ಯೇಸುಕ್ರಿಸ್ತರ ಪ್ರಕಟನೆ.
೪. ಯೇಸುಕ್ರಿಸ್ತರ ರೂಪಾಂತರ.
೫. ಪಾಸ್ಖ ರಹಸ್ಯ ತತ್ವದ ಸಾಂಸ್ಕಾರಿಕ ಗುರುತಾಗಿ ಪರಮಪ್ರಸಾದದ ಸ್ಥಾಪನೆ.

## ೪. ಮಹಿಮೆ ರಹಸ್ಯಗಳು

(ಬುಧವಾರ ಮತ್ತು ಭಾನುವಾರ)

೧. ಮೃತರಾದ ಯೇಸು ಮೂರನೇ ದಿನ ಪುನರುತ್ಥಾನವಾದರು.
೨. ಪುನರುತ್ಥಾನದ ನಂತರ ೪೦ನೇ ದಿನ ಯೇಸು ಮೋಕ್ಷಕ್ಕೆ ಆರೋಹಣವಾದರು.
೩. ಪವಿತ್ರಾತ್ಮರು ಪ್ರೇಷಿತರ ಮೇಲೆ ಇಳಿದು ಬಂದರು.
೪. ದೇವಮಾತೆಯು ಮೋಕ್ಷಕ್ಕೆ ಆರೋಹಣವಾದರು.
೫. ದೇವಮಾತೆ ಸ್ವರ್ಗದ ಹಾಗೂ ಸಕಲ ಸಂತರ ರಾಣಿಯಾಗಿ ಕಿರೀಟಧಾರಣೆಯಾದರು.

# ನಮೋರಾಣಿಯೇ ಪ್ರಾರ್ಥನೆ

ನಮೋರಾಣಿಯೇ, ದಯೆಯ ತಾಯೇ,
ನಮ್ಮ ಜೀವವೇ, ಮಾಧುರ್ಯವೇ, ನಂಬಿಕೆಯೇ,
ಏವೆಯ ಬಹಿಷ್ಕೃತ ಮಕ್ಕಳಾದ ನಾವು ನಿಮಗೆ ಮೊರೆಯಿಡುತ್ತೇವೆ.
ಈ ಕಣ್ಣೀರ ಕಣಿವೆಯಲ್ಲಿ ಬಹು ಸಂಕಟದಿಂದ ಅತ್ತು, ಪ್ರಲಾಪಿಸುತ್ತೇವೆ.
ಆದುದರಿಂದ ನಮ್ಮ ಆಶ್ರಯವೇ, ನಿಮ್ಮ ಕೃಪಾಕಟಾಕ್ಷವನ್ನು ನಮ್ಮ ಮೇಲೆ ಇರಿಸಿರಿ ಮತ್ತು ಈ ದೇಶಾಂತರ ವಾಸವು ತೀರಿದ ಬಳಿಕ ನಿಮ್ಮ ಉದರದ ಧನ್ಯ ಫಲವಾದ ಯೇಸುವಿನ ದರ್ಶನವನ್ನು ನಮಗೆ ನೀಡಿರಿ.
ದಯಾಪರಿಯೇ, ಪ್ರೀತಿಮಯಿಯೇ, ಮಧುರ ಕನ್ಯಾಮರಿಯೇ,

ಗು : ಕ್ರಿಸ್ತರ ವಾಗ್ದಾನಗಳಿಗೆ ನಾವು ಪಾತ್ರರಾಗುವಂತೆ,
ಸ : ಪರಿಶುದ್ಧ ದೇವ ಮಾತೆಯೇ, ನಮಗಾಗಿ ಪ್ರಾರ್ಥಿಸಿರಿ.

# ಪ್ರಾರ್ಥಿಸೋಣ

ದೇವರೇ, ನಿಮ್ಮ ಏಕಮಾತ್ರ ಕುಮಾರರು ತಮ್ಮ ಜೀವನ ಮರಣ ಮತ್ತು ಪುನರುತ್ಥಾನದಿಂದ ನಿತ್ಯ ರಕ್ಷಣೆಯನ್ನು ನಮಗೆ ಸಂಪಾದಿಸಿಕೊಡುವಂತೆ ಮಾಡಿದಿರಿ; ಆ ರಕ್ಷಣೆಯ ಸಂಭಾವನೆಯನ್ನು ನಾವು ಪಡೆಯುವಂತೆ ಅನುಗ್ರಹಿಸಿದ್ದೀರಿ. ಪರಿಶುದ್ಧ ಕನ್ಯಾ ಮರಿಯಮ್ಮನವರ ಪೂಜ್ಯ ಜಪಸರದಲ್ಲಿ ಅಡಗಿರುವ ಈ ಪರಮ ರಹಸ್ಯಗಳನ್ನು ಧ್ಯಾನಿಸುವ ನಾವು ಅವುಗಳು ಸೂಚಿಸುವಂಥವುಗಳನ್ನು ಅನುಸರಿಸುವಂತೆಯೂ ಅವು ವಾಗ್ದಾನ ಮಾಡುವವುಗಳನ್ನು ಪಡೆಯುವಂತೆಯೂ ಮಾಡಿರಿ. ನಮ್ಮ ಕರ್ತ ಯೇಸುಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ, ಆಮೆನ್.

ಗು : ಯೇಸುಕ್ರಿಸ್ತರ ಮಹಾಪರಿಶುದ್ಧ ಹೃದಯವೇ,
ಸ : ನಮಗೆ ದಯೆತೋರಿ.
ಗು : ಮರಿಯಮ್ಮನವರ ನಿಷ್ಕಳಂಕ ಹೃದವೇ,
ಸ : ನಮಗಾಗಿ ಪ್ರಾರ್ಥಿಸಿರಿ.
ಗುಃ ಸಂತ ಜೋಸೆಫರೇ,
ಸಃ ನಮಗಾಗಿ ಪ್ರಾರ್ಥಿಸಿರಿ.
ಗುಃ ಸಂತ ಅರುಳಪ್ಪನವರೇ
ಸಃ ನಮಗಾಗಿ ಪ್ರಾರ್ಥಿಸಿರಿ.
ಗುಃ ಸಂತ ಲೂಯಿ ಮರಿಯ ದೆ ಮೊಂಟ್ ಪೋರ್ಟ್‌ರವರೇ,
ಸಃ ನಮಗಾಗಿ ಪ್ರಾರ್ಥಿಸಿರಿ.

ಪಿತನ ಮತ್ತು ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ, ಆಮೆನ್.

# ಸ್ತೋತ್ರ ಸರಪಣಿ

**ಶ್ಲೋಕಃ—** ಚಂದ್ರನಂತೆ ಸೌಂದರ್ಯವುಳ್ಳವಳಾಗಿ ಸೂರ್ಯನಂತೆ ಪ್ರಕಾಶವುಳ್ಳವಳಾಗಿ, ಯುದ್ದಕ್ಕೆ ಸಿದ್ದವಿರುವ ಸೇನೆಯಂತೆ ಭಯಂಕರಳಾಗಿ, ಉದಯಕಾಲದಂತೆ ಉದಯಿಸಿ ಬರುತ್ತಿರುವವಳು ಯಾರು ?

ಗು : ನನ್ನಾತ್ಮವು ' ಕರ್ತರನ್ನು ಸ್ತುತಿಸುತ್ತದೆ.

ಸ : ನನ್ನ ಜೀವವು ನನ್ನ ರಕ್ಷಕರಾದ ದೇವರಲ್ಲಿ ಸಂತೋಷದಿಂದ ನೆಗೆಯುತ್ತಿದೆ.

ಗು : ಏಕೆಂದರೆ ತಮ್ಮ ಸೇವಕಿಯ ದೈನ್ಯತೆಯನ್ನು ಅವರು ಈಕ್ಷಿಸಿದ್ದಾರೆ. ಇಗೋ ಇಂದಿನಿಂದ ಎಲ್ಲಾ ಸಂತತಿಗಳು ನನ್ನನ್ನು ಭಾಗ್ಯವತಿ ಎಂದು ಹೊಗಳುವುವು.

ಸಃ ಶಕ್ತರು ನನಗೆ ಮಹತ್ಕಾರ್ಯಗಳನ್ನು ಎಸಗಿದ್ದಾರೆ, ಅವರ ಹೆಸರು ಪವಿತ್ರವಾದದ್ದು.

ಗುಃ ತಲತಲಾಂತರದವರೆಗೂ ಅವರ ಕರುಣೆಯು ಅವರಲ್ಲಿ ಭಯಭಕ್ತಿಯುಳ್ಳವರ ಮೇಲೆ ನೆಲಸುವುದು.

ಸಃ ಅವರು ತಮ್ಮ ಬಾಹುಬಲವನ್ನು ಪ್ರದರ್ಶಿಸಿದ್ದಾರೆ. ಅಹಂಕಾರಿ ಹೃದಯುತರನ್ನು ಚದುರಿಸಿದ್ದಾರೆ.

ಗುಃ ಬಲಾಢ್ಯರನ್ನು ತಮ್ಮ ಆಸನಗಳಿಂದ ತಳ್ಳಿ, ದೀನರನ್ನು ಉನ್ನತಿಗೆ ಏರಿಸಿದ್ದಾರೆ.

ಸಃ ಹಸಿದವರನ್ನು ಒಳ್ಳೆಯ ವಸ್ತುಗಳಿಂದ ತುಂಬಿ, ಧನವಂತರನ್ನು ಬರಿಗೈಯಲ್ಲೇ ಕಳುಹಿಸಿದ್ದಾರೆ.

ಗುಃ ತಮ್ಮ ಕರುಣೆಯನ್ನು ಜ್ಞಾಪಿಸಿಕೊಂಡು, ತಮ್ಮ ದೇವಕ ಇಸ್ರಾಯೇಲರನ್ನು ಪಾಲಿಸಿದ್ದಾರೆ.

ಸಃ ನಮ್ಮ ಪೂರ್ವಜರಾದ ಅಬ್ರಹಾಮ್ ಮತ್ತು ಅವರ ಸಂತತಿಗೆ ಅವರು ಮಾತು ಕೊಟ್ಟ ಪ್ರಕಾರ ಸತತವೂ.

ಗುಃ ಪಿತನಿಗೂ, ಸುತನಿಗೂ, ಪವಿತ್ರಾತ್ಮನಿಗೂ ಮಹಿಮೆ ಆಗಲಿ.

ಸಃ ಆದಿಯಲ್ಲಿ ಇಅದ್ದ ಹಾಗೆ, ಈಗಲೂ ಯಾವಾಗಲೂ ಯುಗಯುಗಾಂತರಕ್ಕೂ, ಆಮೆನ್.

**ಶ್ಲೋಕ:** ಚಂದ್ರನಂತೆ ಸೌಂದರ್ಯವುಳ್ಳವಳಾಗಿ ಸೂರ್ಯನಂತೆ

ಪ್ರಕಾಶವುಳ್ಳವಳಾಗಿ,ಯುದ್ಧಕ್ಕೆಸಿದ್ಧವಿರುವ ಸೇನೆಯಂತೆ ಭಯಂಕರಳಾಗಿ,

ಉದಯಕಾಲದಂತೆ ಉದಯಿಸಿ ಬರುತ್ತಿರುವವಳು ಯಾರು ?

ಗು : ಜನ್ಮಪಾಪ ಕಳಂಕವಿಲ್ಲದೆ ಉದ್ಭವಿಸಿದ ಮರಿಯಮ್ಮನವರೇ,
ಸ : ನಿಮ್ಮ ಆಶ್ರಯವನ್ನು ಹುಡುಕುವ ನಮಗಾಗಿ ಪ್ರಾರ್ಥಿಸಿರಿ.

# ಪ್ರಾರ್ಥಿಸೋಣ

ನಿತ್ಯ ಪಿತನಿಗೂ ನಮಗೂ ಮಧ್ಯಸ್ಥರಾಗಿರುವ ಓ ಕರ್ತರಾದ ಯೇಸುಕ್ರಿಸ್ತರೇ, ನೀವು ನಿಮ್ಮ ಮಾತೆಯಾದ ಮಹಾ ಪರಿಶುದ್ದ ಕನ್ಯಾಮರಿಯಮ್ಮನವರನ್ನು ನಮ್ಮ ತಾಯಿಯಾಗಿಯೂ, ನಿಮಗೂ ನಮಗೂ ಮದ್ಯಸ್ಥಳಾಗಿಯೂ, ಕೊಡಲು ಇಚ್ಛಿಸಿದ್ದೀರಿ; ನಿಮ್ಮ ವರಗಳನ್ನು ಕೋರುವವರೆಲ್ಲರೂ ಅವುಗಳನ್ನು ಆಕೆಯ ಮುಖಾಂತರ ಪಡೆಯುವ ಭಾಗ್ಯವನ್ನು ಹೊಂದುವಂತೆ ಮಾಡಕರುಣೆಸಿರಿ, ಆಮೆನ್.

# ಮುಕ್ತಾಯ ಪ್ರಾರ್ಥನೆ

ಪಿತನ ಮತ್ತು ಸುತನ ಮತ್ತು ಪವಿತ್ರಾತ್ಮರ ನಾಮದಲ್ಲಿ, ಆಮೆನ್.

ಸರ್ವೇಸ್ವರನ ಪರಿಶುದ್ದ ಮಾತೆಯೇ, ಇಗೋ ನಾವು ನಿಮ್ಮ ಆಶ್ರಯಕ್ಕೆ ಓಡಿ ಬಂದಿರುತ್ತೇವೆ, ನಮ್ಮ ಅವಶ್ಯಕತೆಗಳಲ್ಲಿ ನಮ್ಮ ಪ್ರಾರ್ಥನೆಗಳನ್ನು ನಿರಾಕರಿಸಬೇಡಿ. ಓ ಮಹಿಮೆಯುಳ್ಳ ಪರಿಶುದ್ದ ಕನ್ನಿಕೆಯೇ ನಮ್ಮನ್ನು ಸಕಲ ಆಪತ್ತುಗಳಿಂದ ಸದಾ ಸಂರಕ್ಷಿಸಿ ಕರುಣೆಸಿರಿ, ಆಮೆನ್.

ಗು : ಅಮಲೋದ್ಭವಿಯಾದ ಮರಿಯಮ್ಮನವರೇ, (ಅಥವಾ ಇಲ್ಲಿ ಪ್ರೆಸೀಡಿಯುಮ್ಮಿನ ಹೆಸರನ್ನು ಹೇಳುವುದು)
ಸ : ನಮಗಾಗಿ ಪ್ರಾರ್ಥಿಸಿರಿ.
ಗು : ಪ್ರಧಾನ ದೇವದೂತರಾದ ಸಂತ ಮಿಖಾಯೇಲರೇ, ಗಾಬ್ರಿಯೇಲರೇ,

ಸ : ನಮಗಾಗಿ ಪ್ರಾರ್ಥಿಸಿರಿ.

ಗು : ಮರಿಯಮ್ಮನ ಸಕಲ ಸ್ವರ್ಗೀಯ ಶಕ್ತದೂತರೇ,

ಸ : ನಮಗಾಗಿ ಪ್ರಾರ್ಥಿಸಿರಿ.

ಗು : ಸಂತ ಸ್ನಾನಿಕ ಅರುಳಪ್ಪನವರೇ,

ಸ : ನಮಗಾಗಿ ಪ್ರಾರ್ಥಿಸಿರಿ.

ಗು : ಸಂತ ರಾಯಪ್ಪ ಮತ್ತು ಚಿನ್ನಪ್ಪನವರೇ,

ಸ : ನಮಗಾಗಿ ಪ್ರಾರ್ಥಿಸಿರಿ.

## ಪ್ರಾರ್ಥಿಸೋಣ

ನಮ್ಮ ಕರ್ತರಾದ ಯೇಸುಕ್ರಿಸ್ತರೇ / ಮರಿಯಮ್ಮನವರ ಧ್ವಜದಡಿಯಲ್ಲಿ / ಸೇವೆ ಸಲ್ಲಿಸುತ್ತಿರುವ ನಮಗೆ / ಲೋಕವನ್ನು ಜಯಿಸಲು ಬೇಕಾದ / ಪೂರ್ಣ ವಿಶ್ವಾಸವನ್ನೂ / ದೇವಮಾತೆಯಲ್ಲಿ ಪೂರ್ಣ ಭರವಸೆಯನ್ನೂ ಅನುಗ್ರಹಿಸಿರಿ / ನಮಗೆ ಬಂದೊದಗುವ / ಕಷ್ಟದುಃಖಗಳಲ್ಲೂ, ಶಿಲುಬೆಗಳಲ್ಲೂ / ಅಪಜಯಗಳಲ್ಲೂ / ನಾವು ಮನಸೋಲದ ಹಾಗೆ ಬಂಡೆಯಂತಹ ದೃಢ ವಿಶ್ವಾಸವನ್ನೂ ನಮಗೆ ಕರುಣಿಸಿರಿ / ದೇವರಿಗಾಗಿಯೂ / ಆತ್ಮಗಳ ರಕ್ಷಣೆಗಾಗಿಯೂ / ಮಹಾತ್ತಾದ ಕಾರ್ಯಗಳನ್ನು ಧೈರ್ಯದಿಂದ ಕೈಗೊಂಡು / ಮುಂದುವರಿಸಲು ಬೇಕಾದ ಉತ್ಸಾಹ ಪೂರಿತವಾದ ವಿಶ್ವಾಸವನ್ನು ಅನುಗ್ರಹಿಸಿರಿ. ನಾವೆಲ್ಲರೂ ಐಕ್ಯವಾಗಿ ನಡೆದುಕೊಳ್ಳುವಂತೆಯೂ / ದೈವ ಪ್ರೀತಿಯೆಂಬ ಅಗ್ನಿಯನ್ನು / ಎಲ್ಲೆಲ್ಲೂ ಪ್ರಜ್ವಲಗೊಳಿಸುವಂತೆಯೂ / ಅಂಧಕಾರ ಮತ್ತು ಮರಣದ ನೆರಳಲ್ಲಿ ವಾಸಿಸುವವರಿಗೆ / ಜ್ಞಾನೋದಯವನ್ನು ಉಂಟುಮಾಡುವಂತೆಯೂ / ಉದಾಸೀನರನ್ನು ಆಸಕ್ತರನ್ನಾಗಿ ಮಾಡುವಂತೆಯೂ / ಪಾಪಿಗಳನ್ನು ಪುನೀತರನ್ನಾಗಿ ಮಾಡುವಂತೆಯೂ / ನಾವೆಲ್ಲರೂ ಸಮಾಧಾನದ ಹಾದಿಯಲ್ಲಿ ಮುನ್ನಡೆಯುವಂತೆಯೂ / ಸೇನೆಯ ಅಗ್ನಿಸ್ತಂಭದಂತಹ / ವಿಶ್ವಾಸವನ್ನು ಕರುಣಿಸಿರಿ / ಹೀಗೆ ಇಹಲೋಕದ ಹೋರಾಟವೂ ಮುಗಿದ ನಂತರ / ಸೇವಕರಲ್ಲಿ ಒಬ್ಬರನ್ನೂ ಕಳೆದುಕೊಳ್ಳದೆ / ನಾವೆಲ್ಲರೂ ನಿಮ್ಮ ಮಹಿಮಾಭರಿತ, ಪ್ರೀತಿಮಯ ಪರಲೋಕ ರಾಜ್ಯಕ್ಕೆ / ಬಂದು ಸೇರುವಂತೆ / ಮಾಡ ಕರುಣಿಸಿರಿ ಸ್ವಾಮಿ. ಆಮೆನ್.

ಮೃತಪಟ್ಟ ಸೇವಕರ ಆತ್ವಗಳು / ಮತ್ತು ಮೃತಪಟ್ಟ ಸಕಲ ವಿಶ್ವಾಸಿಗಳ ಆತ್ಮಗಳು

ದೇವರ ದಯೆಯಿಂದ ನಿತ್ಯ ವಿಶ್ರಮವನ್ನು ಪಡೆಯಲಿ, ಆಮೆನ್.

ಪಿತನ ಮತ್ತು ಸುತನ ಮತ್ತು ಪವಿತ್ರಾತ್ಮರ ನಾಮದಲ್ಲಿ, ಆಮೆನ್

ಅನುಮತಿಃ
ಅತಿ. ವಂ. ಡಾ ॥ ಬರ್ನಾಡ್ ಮೊರಾಸ್
ಬೆಂಗಳೂರಿನ ಮಹಾ ಧರ್ಮಾಧ್ಯಕ್ಷರು.